AS – 002

**II Semester B.Sc. Examination, April / May 2012**
**(Freshers Scheme)**
**( 2011 – 12 & Onwards)**
**ಕನ್ನಡ ಭಾಷೆ – II**
**ಸಾಹಿತ್ಯ ಸಲ್ಲಾಪ - I**

Time : 3 Hours  Max. Marks : 100

I. ಅ) ಈ ಪದ್ಯದ ಭಾವಾರ್ಥ ಬರೆಯಿರಿ : **(1×6=6)**

ನರಿಗಳೆಳೆಯದ ಮುನ್ನ ದಹಿಸಬೇಡವೆ ತಂದೆ
ಕರುಣಿಸೆನೆ ದುರ್ಮರಣವಟ್ಟ ಶೂದ್ರನನು ಸಂ
ಸ್ಕರಿಸುವವರಾವಲ್ಲವೆಂದೆನಲ್ಕಾನಡಂ ಹೋಗಿ ಕಂಡು ಮಗನ
ಬರಿಗಿತ್ತು ಬಪ್ಪೆನೇ ಎನೆ ಕೆಲಸಮಂ ಬಿಟ್ಟು
ಹರಿಯದಿದಿರ್ದುದನೆಯ್ದಿ ಗೆಯ್ದು ಹೋಗೆನಲು ಚ
ಚ್ಚರದಿ ಮಾಡುವ ಕಜ್ಜವೆಲ್ಲವಂ ಮಾಡಿ ಹೊರವಂಟಳೊಯನೆ ಮನೆಯನು

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. **(2×3=6)**

ಷಟ್ಪದಿ, ಲಂಕೇಶ್, ದನತಿನ್ನೋನಿಗೆ ಗೊಬ್ಬರದಾಣೆ

II. ಅ) ಇವುಗಳಲ್ಲಿ ಐದು ಪದಗಳಿಗೆ ಮೂಲರೂಪ ಬರೆಯಿರಿ : **(1×5=5)**

ಜಕ್ಕಿಣಿ, ಭಕುತಿ, ರಾಯ, ಹೋಟ್ಲು, ಡಾಕುಟ್ರು, ಗಿರಾಕಿ, ಬಿತ್ತರ

ಆ) ಇವುಗಳಲ್ಲಿ ಐದು ಪದಗಳಿಗೆ ಅರ್ಥ ಬರೆಯಿರಿ. **(1×5=5)**

ತರಳ, ಪದ್ಮಪತ್ರ, ಭಲ್ಲೂ, ಮೃಡ, ದಹಿಸು, ಹದ್ದಿನಲ್ಲಿಡು, ಬಟ್ಟೆ

ಇ) ಇವುಗಳಲ್ಲಿ ಐದು ಪದಗಳನ್ನು ಬಿಡಿಸಿ ಬರೆಯಿರಿ. **(1×5=5)**

ದಶಾಸ್ಯ, ಕರ್ಬೊಗೆ, ಕೆಂಗಣ್ಣು, ಹೆಮ್ಮರ, ಒಳಾಂಗಣ, ಹೂವಿಂದ, ತಂಗಳು.

ಈ) ಇವುಗಳಲ್ಲಿ ಐದನ್ನು ಬಳಸಿ ಸ್ವಂತ ವಾಕ್ಯ ರಚಿಸಿ. **(1×5=5)**

ಮೂಗುಮುರಿ, ಹತೋಟಿಯಲ್ಲಿಡು, ಕಿಂದರಿಜೋಗಿ, ಬೆನ್ನುಹತ್ತು, ಮುಳ್ಳಾಗು, ಕಮಲಮುಖಿ, ಪೂರ್ಣ ಕುಂಭ.

P.T.O.

www.onlinebu.com

www.onlinebu.com

III. ಇವುಗಳಲ್ಲಿ ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. (4×5=20)

1) ಒಡೆಯನ ಮನೆಯಲ್ಲಿ ಚಂದ್ರಮತಿ ಅನುಭವಿಸಿದ ಕಷ್ಟಗಳಾವುವು ?

2) ನವಯುಗದ ಯುವಕರಿಗೆ ಅಡಿಗರು ಕೊಡುವ ಸಂದೇಶವೇನು ?

3) ಮಾಂಸಾಹಾರದ ನಿರಾಕರಣೆಯ ಹಿಂದೆ ಇರುವ ಉದ್ದೇಶಗಳೇನು ?

4) ಗಾಂಧಿಯಲ್ಲಿದ್ದ ಬುದ್ಧನ ಗುಣಗಳಾವುವು ?

5) ಕಡಿದಾಳು ಮಂಜಪ್ಪ ನವರ ಎದುರು ಕಪ್ಪು ಬಟ್ಟೆ ಪ್ರದರ್ಶನ ಮಾಡಲು ಕಾರಣವೇನು ?

6) ''ಕಾಲ ಎಲ್ಲವನ್ನೂ ಹಗುರಗೊಳಿಸುತ್ತದೆ'' ಎಂದು ಕ್ರೆಯಾನ್ ಹೇಳಲು ಕಾರಣವೇನು ?

IV. ಇವುಗಳಿಗೆ ವಿವರವಾಗಿ ಉತ್ತರಿಸಿ. (4×12=48)

1) ಮಗನನ್ನು ಕಳೆದುಕೊಂಡ ಚಂದ್ರಮತಿಯ ಅಳಲನ್ನು ಕವಿ ಹೇಗೆ ಚಿತ್ರಿಸಿದ್ದಾನೆ ?

**ಅಥವಾ**

ರಾವಣನ ಮನಃ ಪರಿವರ್ತನೆಯಾಗಲು ಕಾರಣಗಳೇನು ? ವಿವರಿಸಿ.

2) ಹೆಂಗಸರು ಮತ್ತು ಗಂಡಸರ ಪ್ರಾಬಲ್ಯವನ್ನು ಕುರಿತ ವಿವರಗಳು ಪ್ರಬಂಧದಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿ.

**ಅಥವಾ**

ಆಹಾರ ಪದ್ಧತಿಯ ಶ್ರೇಣೀಕರಣ ಉಂಟುಮಾಡಿದ ಸಾಂಸ್ಕೃತಿಕ ರಾಜಕಾರಣ 'ಹೊಲಸು ತಿಂಬುವವನೆ ಹೊಲೆಯ' ಪ್ರಬಂಧದಲ್ಲಿ ಹೇಗೆ ಪ್ರಕಟವಾಗಿದೆ ? ವಿವರಿಸಿ.

3) ಜಾತಿಗಳು ಸೃಷ್ಟಿಸುವ ಸಂಕುಚಿತ ಮನೋಭಾವವನ್ನು 'ಅವಶೇಷ' ಕಥೆ ಹೇಗೆ ಬಯಲು ಮಾಡುತ್ತದೆ ? ವಿವರಿಸಿ.

**ಅಥವಾ**

''ದೇವರು ಈ ಮನುಷ್ಯನಿಗೆ ಯಾಕಾದರೂ ಹಸಿವು ಕೊಟ್ಟನೊ''–ಎಂದು ಲೇಖಕನಿಗೆ ಅನ್ನಿಸಲು ಕಾರಣಗಳೇನು ?

4) ಪಾಪ ಪ್ರಜ್ಞೆಯಿಂದ ನರಳುತ್ತಿರುವ ಈಡಿಪಸ್‌ನ ಮಾನಸಿಕ ಯಾತನೆ ನಾಟಕದಲ್ಲಿ ಹೇಗೆ ಬಿಂಬಿತವಾಗಿದೆ ?

**ಅಥವಾ**

ದೇವವಾಣಿಯನ್ನು ಹುಸಿಗೊಳಿಸಲು ಮಾಡಿದ ವಿಫಲ ಪ್ರಯತ್ನ ನಾಟಕದಲ್ಲಿ ಹೇಗೆ ಪ್ರಕಟಗೊಂಡಿದೆ ? ವಿವರಿಸಿ.

www.onlinebu.com
www.onlinebu.com
http://www.onlinebu.com